ಅನುಬಂಧ

ನಷ್ಟದಲ್ಲಿ ನಡೆಯುತ್ತಿರುವ ಕಾರ್ಖಾನೆಗಳ ಹೆಸರುಗಳ ಪಟ್ಟಿ ಮತ್ತು ಮ...

		ಲಕ್ಷ ರೂ	ವರ್ಷ
1)	ನೂತನ ಸರ್ಕಾರಿ ವಿದ್ಯುತ್ ಕಾರ್ಖಾನೆ (ಎನ್.ಜಿ.ಇ.ಎಫ್.	92-93	92-93
2)	ಕರ್ನಾಟಕ ಚರ್ಮ ಕೈಗಾರಿಕಾ ನಿಗಮ (ಲಿಡ್ಕರ್)	491.02	94-95
3)	ಮೈಷುಗರ್	203	92-93
4)	ಮೈಸೂರು ಕಾಗದ ಕಾರ್ಖಾನೆ	5709.82	92-93
5)	ಕರ್ನಾಟಕ ರಾಜ್ಯ ತೆಂಗು ನಾರಿನ ಅಭಿವೃದ್ಧಿ ನಿಗಮ	36.53	92-93
6)	ಕರ್ನಾಟಕ ವಿದ್ಯುತ್ ಕಾರ್ಖಾನೆ	113.59	92-93
7)	ಕಿಯೋನಿಕ್ಸ್	926.96	92-93
8)	ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತ	9189.58	92-93
9)	ಮೈಸೂರು ಎಲೆಕ್ಟ್ರಿಕಲ್ ಇಂಡಸ್ಟ್ರೀಸ್	893.58	92-93
10)	ಕಿಮ್ಕೋ	2253.81	92-93
11)	ಕರ್ನಾಟಕ ರಾಜ್ಯ ರೇಷ್ಮೆ ಕೈಗಾರಿಕೆ ನಿಗಮ	2266.86	92-93
12)	ಕರ್ನಾಟಕ ರಾಜ್ಯ ಟೆಕ್ಸ್ಟೈಲ್ಸ್ ಲಿ.	327.82	92-93
13)	ಕರ್ನಾಟಕ ಸಿಲ್ಕ್ ಮಾರ್ಕೆಟಿಂಗ್ ಬೋರ್ಡ್	370.11	92-93
14)	ಮೈಸೂರು ಕ್ರೋಂ ಟ್ಯಾನಿಂಗ್ ಲಿಮಿಟೆಡ್	746.36	92-93
15)	ಚಾಮುಂಡಿ ಮೆಷಿನ್ ಟೂಲ್ಸ್	252.83	92-93
16)	ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ	215.30	89-90
17)	ಮೈಸೂರು ಕಾಸ್ಟ್ಟಿಕ್ಸ್	28.30	90-91

ಬೆಳವಡಿ ಮಲ್ಲಮ್ಮನ ಬೆಳವಡಿಯನ್ನು ಅಭಿವೃದ್ಧಿ ಪಡಿಸುವ ಬಗ್ಗೆ

137 - ಶ್ರೀ ಶಿವಾನಂದ ಪೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಪ್ರವಾಸೋದ್ಯಮ ಹಾಗೂ ಸಾರ್ವಜನಿಕ ಕುಂದುಕೊರತೆಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾಂ ಜಿಲ್ಲೆ ಬೆಳವಡಿಯಲ್ಲಿ ಬೆಳವಡಿ ಮಲ್ಲಮ್ಮನ ಅಭಿವೃದ್ಧಿ ಪಡಿಸುವ ಸಲುವಾಗಿ ಸರ್ಕಾರದವರು ಯಾವ ಕ್ರಮ ಕೈಗೊಂಡಿರುವರು?

ಆ) ಬೆಳವಡಿ ಗ್ರಾಮದಲ್ಲಿ ಬೆಳವಡಿ ಮಲ್ಲಮ್ಮನ ಅಭಿವೃದ್ಧಿ ಮಾಡುವುದು ಅತಿ ಅವಶ್ಯವಿದ್ದು, ಸರ್ಕಾರದವರು ಆದ್ಯತೆಯ ಮೇರೆಗೆ ಕಿತ್ತೂರು ಚೆನ್ನಮ್ಮನ ಅಭಿವೃದ್ಧಿ ಕೆಲಸ ಮಾಡಿದಂತೆ ಇಲ್ಲಿಯೂ ಕೂಡ ಎಲ್ಲಾ ರೀತಿಯಲ್ಲಿಯೂ ಅಭಿವೃದ್ಧಿ ಮಾಡುವರೆ?

ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಪ್ರವಾಸೋದ್ಯಮ ಮತ್ತು ಸಾರ್ವಜನಿಕ ಕುಂದುಕೊರತೆಗಳ ರಾಜ್ಯ ಸಚಿವರು):

ಅ) ಯಾವ ಕ್ರಮ ಕೈಗೊಂಡಿರುವುದಿಲ್ಲ.

ಆ) ಅಂತಹ ಯಾವ ಯೋಜನೆಯೂ ಸದ್ಯಕ್ಕೆ ಸರ್ಕಾರದ ಮುಂದೆ ಇರುವುದಿಲ್ಲ.

ಸಂಗೊಳ್ಳಿ ರಾಯಣ್ಣ ವಂಶಜರಿಗೆ ಸರ್ಕಾರದಿಂದ ಸಹಾಯ

136 - ಶ್ರೀ ಶಿವಾನಂದ ಪೆಚ್. ಕೌಜಲಗಿ (ಬೈಲಹೊಂಗಲ): ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಂಗೊಳ್ಳಿ ರಾಯಣ್ಣನ ವಂಶಜರು ಸರ್ಕಾರದಿಂದ ತಮಗೆ ಸಹಾಯ ಮಾಡಬೇಕೆಂದು ಮನವಿಗಳನ್ನು ಸಲ್ಲಿಸಿರುವ ಸಂಗತಿ ನಿಜವೇ?

ಆ) ಹಾಗಿದ್ದಲ್ಲಿ ಅವರಿಗೆ ಸರ್ಕಾರದವರು ಯಾವ್ಯಾವ ಸವಲತ್ತುಗಳನ್ನು ಕೊಡಬೇಕೆಂದು ನಿರ್ಣಯಿಸಿರುವುದು.

ಇ) ಒಂದು ವೇಳೆ ಇದುವರೆಗೂ ನಿರ್ಣಯಿಸದೇ ಇದ್ದಲ್ಲಿ ಕಿತ್ತೂರು ಚೆನ್ನಮ್ಮನ ವಂಶಜರಿಗೆ ಯಾವ ಪ್ರಕಾರವಾಗಿ ಸವಲತ್ತುಗಳನ್ನು ಕೊಡಲಾಗುತ್ತಿದೆಯೋ ಅದೇ ಪ್ರಕಾರವಾಗಿ ಸಂಗೊಳ್ಳಿ ರಾಯಣ್ಣನ ವಂಶಜರಿಗೆ ಕೂಡ ಸರ್ಕಾರದವರು ಸಹಾಯವನ್ನು ಕೊಡುವುದೇ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):

ಅ) ಇಲ್ಲ- ಆದರೆ ಅರ್ಜಿ ಸಲ್ಲಿಸಿರುವವರು ಸಂಗೊಳ್ಳಿ ರಾಯಣ್ಣನ ವಂಶಜರಾಗಿರದೆ ಅವರ ತಾತನ ಸಹೋದರನ ಏಳನೇ ತಲೆಮಾರಿನವರಾಗಿದ್ದು, ಅವರ್ಯಾರೂ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ ಪೀಠದ ಪ್ರಾರಂಭ

77 - ಶ್ರೀ ಶಿವಾನಂದ ಪೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ ಪೀಠವನ್ನು ಪ್ರಾರಂಭಿಸಲು ಸರ್ಕಾರಕ್ಕೆ ಸಾರ್ವಜನಿಕರಿಂದ ಮನವಿಗಳು ಬಂದಿವೆಯೇ?

ಆ) ಹಾಗಿದ್ದಲ್ಲಿ ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ ಪೀಠವನ್ನು ಪ್ರಾರಂಭಿಸಲು ಸರ್ಕಾರದವರು ಯಾವ ಕ್ರಮವನ್ನು ಕೈಗೊಂಡಿರುವರು?

ಇ) ಹೈಕೋರ್ಟಿನವರು ಹುಬ್ಬಳ್ಳಿ ಧಾರವಾಡ ನಡುವೆ ಹೈಕೋರ್ಟ್ ಪೀಠವನ್ನು ಪ್ರಾರಂಭಿಸಲು ಸಮ್ಮತಿಯನ್ನು ನೀಡಿದ ಸಂಗತಿ ನಿಜವೇ?

ಈ) ರಾಜ್ಯ ಸರ್ಕಾರದ ನಿರ್ಲಕ್ಷತನದಿಂದ ಇಮವರೆಗೂ ಹೈಕೋರ್ಟ್ ಪೀಠವನ್ನು ಪ್ರಾರಂಭಿಸಲಾಗದಿರುವ ಸಂಗತಿ ನಿಜವೇ?

ಉ) ಒಂದು ವೇಳೆ ಸರ್ಕಾರವು ಆಶ್ವಾಸನೆ ನೀಡಿದ ಪ್ರಕಾರ ಹೈಕೋರ್ಟ್ ಪೀಠವನ್ನು ಬೇಗನೆ ಪ್ರಾರಂಭ ಮಾಡದೇ ಇದ್ದಲ್ಲಿ ಪುನಃ ಹುಬ್ಬಳ್ಳಿ ಧಾರವಾಡ ವಕೀಲ ಸಂಘದವರು ಉಪವಾಸ ಸತ್ಯಾಗ್ರಹ ಮಾಡುವುದಾಗಿ ಸರ್ಕಾರಕ್ಕೆ ಮನವಿಗಳು ಕಳುಹಿಸಿದ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ?

ಊ) ಹಾಗಿದ್ದಲ್ಲಿ, ಇನ್ನು ಎಷ್ಟು ದಿವಸಗಳಲ್ಲಿ ಹೈಕೋರ್ಟ್ ಪೀಠವನ್ನು ಹುಬ್ಬಳ್ಳಿ ಧಾರವಾಡದ ನಡುವೆ ಪ್ರಾರಂಭಿಸಲಾಗುವುದು?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):

ಅ) ಹೌದು.